ಈ) ಹಸಿರು ಪಡಿತರ ಚೀಟಿಯನ್ನು ನೀಡುವಾಗ ಜಾತಿಯನ್ನು ಆಧಾರವನ್ನಾಗಿಟ್ಟುಕೊಂಡು ನೀಡಿಲ್ಲದಿರುವುದರಿಂದ ಈ ಮಾಹಿತಿಗಳು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ವಿಷಯ:- ದಕ್ಷಿಣ ಜಿಲ್ಲೆಯಲ್ಲಿ ನಡೆದ ಕೊಲೆ ಸುಲಿಗೆ, ಕಳವುಗಳ ಪ್ರಕರಣಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 667 (1476)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96ರಲ್ಲಿ ನಡೆದ ಕೊಲೆ, ಸುಲಿಗೆ ಕಳುವಿನ ಪ್ರಕರಣಗಳೇಷ್ಟು?

ಆ) ಉಳ್ಳಾಲ ಮತ್ತು ಕೊಣಾಜೆ ಆರಕ್ಷಕ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಕಳವು ಕೊಲೆ ಕೇಸುಗಳೆಷ್ಟು?

ಇ) ಇದರಲ್ಲಿ ಪತ್ತೆ ಮಾಡಿರುವ ಪ್ರಕರಣಗಳೆಷ್ಟು?

ಈ) ಇತ್ತೀಚೆಗೆ ಉಳ್ಳಾಲದಲ್ಲಿ ಕೊಲೆ, ಕಳ್ಳತನಗಳು ಮಿತಿ ಮೀರುತ್ತಿದ್ದು, ಪೋಲೀಸರ ನಿಷ್ಕ್ರೀಯತೆಯೇ ಕಾರಣವೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಉ) ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

		1995	1996
ಅ)			
	ಕೊಲೆ	74	28
	ಸುಲಿಗೆ	38	20
	ಕಳುವು	468	184
ಆ)	ಉಳ್ಳಾಲ : ಕೊಲೆ	5	-
	ಕಳವು	28	12
	ಕೊಣಾಜೆ: ಕೊಲೆ	1	5
	ಕಳವು	11	-
ಇ)	ಉಳ್ಳಾಲ : ಕೊಲೆ	5	-
	ಕೊಣಾಜೆ: ಕೊಲೆ	1	-

ಠಾಣೆ ಕಳವು 7 -

ಈ) ಇಲ್ಲ.

ಉ) ಗ್ರಾಮಗಳಲ್ಲಿ ಗಸ್ತು, ನಾಕಾಬಂದಿ, ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆ, ರೌಡಿಗಳ ಮೇಲೆ ನಿಗಾ, ರೌಡಿ ನಿಗ್ರಹ ದಳದಿಂದ ಕಾರ್ಯಾಚರಣೆ ಮತ್ತು ಇತರೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಈ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದರಿಂದಲೂ, ಮೇಲಧಿಕಾರಿಗಳು ಠಾಣ ಸರಹದ್ದಿಗೆ ಆಗಾಗ್ಗೆ ಭೇಟಿ ಕೊಟ್ಟು ನಿರೀಕ್ಷಣೆಯನ್ನು ನಡೆಸುತ್ತಿರುವುದರಿಂದಲೂ 1996ರಲ್ಲಿ ಈವರೆಗೆ ಉಳ್ಳಾಲದಲ್ಲಿ ಯಾವುದೇ ವೃತ್ತಿಪರ ಅಪರಾಧಿಗಳನ್ನು ಕೂಡ ತಡೆ ಹಿಡಿಯಲು ಅನುಕೂಲವಾಗಿರುತ್ತದೆ. ಇದೇ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಮುಂದುವರಿಸಿ ಕೊಲೆ ಮತ್ತು ಕಳ್ಳತನ ಪ್ರಕರಣಗಳನ್ನು ನಿಯಂತ್ರಣದಲ್ಲಿಡಲಾಗಿರುತ್ತದೆ.

ವಿಷಯ:- ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಕಾವೇರಿ 4ನೇ ಹಂತದ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 696 (1204)

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಜಲಮಂಡಲಿ ಕಾವೇರಿ 4ನೇ ಹಂತದ ನೀರಿನ ಯೋಜನೆಯನ್ನು ಜಾರಿಗೆ ತರಲು ಜಪಾನಿನ ಸಾಗರೋತ್ತರ ಅಭಿವೃದ್ಧಿ ನಿಧಿಯಿಂದ ಪಡೆಯುವ ಹಣವೆಷ್ಟು?

2) ಈ ಹಣವನ್ನು ಪಡೆಯಬೇಕಾದರೆ ಪ್ರತಿ ಮೂರು ವರ್ಷಗಳಿಗೊಮ್ಮೆ ನೀರಿನ ದರವನ್ನು ಏರಿಸಬೇಕೆಂಬ ನಿಬಂಧನೆಯನ್ನು ಸದರಿ ಸಂಸ್ಥೆ ವಿದಿಸಿದೆಯೇ?

3) ಹಾಗಿದ್ದಲ್ಲಿ ಈ ನಿಬಂಧನೆಯನ್ನು ಸರ್ಕಾರದವರು ಒಪ್ಪಿಕೊಂಡಿರುವರೇ?

4) ಈ ಯೋಜನೆಯ ಮೊದಲ ಹಂತದ ಕೆಲಸ ಪ್ರಾರಂಭಿಸಲಾಗಿದೆಯೇ?

5) ಈ ಮೊದಲನೆಯ ಹಂತದ ಕಾಮಗಾರಿಗೆ ಮೇಲ್ಕಂಡ ನಿಧಿಯಿಂದ ಹಣ ಬಿಡುಗಡೆಯಾಗಿದೆಯೆ?

6) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

8) ಇದರಿಂದ ಬೆಂಗಳೂರು ನಗರಕ್ಕೆ ದೊರಕಲಿರುವ ನೀರಿನ ಪ್ರಮಾಣವೆಷ್ಟು?

ಶ್ರೀ ಅನಾಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

1) ಕಾವೇರಿ ನಾಲ್ಕನೇ ಹಂತದ ಕೆಲಸಗಳಿಗೆ ಜಪಾನಿನ ಸಾಗರೋತ್ತರ ಅಭಿವೃದ್ಧಿ